**ಇಂದು ದಿನಾಂಕ:** *15*.06.2026 **ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ಮಾಡಿಸಲಾಯಿತು.**

**ಪಾಟೀ ಸವಾಲು : 6 ಮತ್ತು 7 ನೇ ಪ್ರತಿವಾದಿ ಪರ ಶ್ರೀ. ವಕೀಲರಿಂದಃ**

ನನ್ನ ವಿದ್ಯಾಭ್ಯಾಸಕ್ಕೆ ನನ್ನ ತಂದೆ ಹಣ ಕೊಡುತ್ತಿದ್ದರು. ನಾನು ಡಿಪ್ಲೋಮ ಮಾಡಿರುವುದರಿಂದ 3 ವರ್ಷಕ್ಕೆ ಸುಮಾರು 1 ಲಕ್ಷ ಖರ್ಚು ಆಗಿರಬಹುದು. ನಮ್ಮ ಮನೆಯ ಖರ್ಚುಗಳನ್ನು ನಮ್ಮ ತಂದೆ ನೋಡಿಕೊಳ್ಳುತ್ತಿದ್ದರು. ನನ್ನ ವಿದ್ಯಾಭ್ಯಾಸಕ್ಕೆ ಮತ್ತು ಮದುವೆಗೆ ನನ್ನ ತಂದೆ ಸಾಲ ಮಾಡಿಕೊಂಡಿದ್ದರು ಎಂದರೆ ಸರಿಯಲ್ಲ. ನನ್ನ ಮದುವೆಗೆ ನನ್ನ ಗಂಡನೇ ಖರ್ಚು ಮಾಡಿ ಮದುವೆ ಮಾಡಿಕೊಂಡಿದ್ದಾರೆ. ಆ ಬಗ್ಗೆ ದಾಖಲೆ ಇದೆ. ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇರುವುದಿಲ್ಲ. ನಮ್ಮ ತಂದೆಗೆ ಹುಷಾರಿಲ್ಲದ ಕಾರಣ ಔಷಧಿಗೆ ತುಂಬಾ ಖರ್ಚು ಆಗುತ್ತಿತ್ತು ಎಂದರೆ ಸರಿ . ಔಷಧಿ ಖರ್ಚಿಗಾಗಿ ನಮ್ಮ ತಂದೆ ಸಾಲ ಮಾಡಿದ್ದರು ಎಂದರೆ ಸರಿಯಲ್ಲ . ನಾನು ಖರ್ಚು ಮಾಡುತ್ತಿದ್ದೆ , ನನ್ನ ವೇತನದಿಂದ ಮನೆಗೆ ಖರ್ಚು ಮಾಡುತ್ತಿದ್ದೆ. ನನ್ನ ತಂದೆ ಬದುಕಿದ್ದಾಗ ತುಂಬಾ ಸಾಲ ಮಾಡಿಕೊಂಡಿದ್ದರು , ಜಮೀನು ಮಾರಾಟ ಮಾಡಿ ಸಾಲ ತೀರಿಸಿದ್ದಾರೆ ಎಂದರೆ ಸರಿಯಲ್ಲ. ನಿಜಾಂಶ ಗೊತ್ತಿದ್ದರು ಸಹ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

***(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)***

**ಓ.ಹೆ.ಕೆ.ಸರಿ ಇದೆ.**

ಸಹಿ/-

**ಹಿ.ಸಿ.ನ್ಯಾ ಮತ್ತು ಪ್ರ.ದ.ನ್ಯಾದಂ.**
**ಪಿರಿಯಾಪಟ್ಟಣ**